ರಾಯಚೂರು ಜಿಲ್ಲೆಯ ಉಪ್ಪಾರ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಚಾರಿತ್ರಿಕ ಅಧ್ಯಯನ (1947 ರಿಂದ 1990 ರವರೆಗೆ)

(ಪಿಹೆಚ್.ಡಿ. ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧದ ಅಂತಿಮ ಸಾರಲೇಖ)

ನೋಂದಣಿ ವರ್ಷ : 2019

ಡಿ.ರಾಮಕೃಷ್ಣ
ಸಂಶೋಧಕರು

ಪ್ರೊ.ನಿರ್ಮಲ್ ರಾಜು
ಮಾರ್ಗದರ್ಶಕರು

ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

2024

ರಾಯಚೂರು ಜಿಲ್ಲೆಯ ಉಪ್ಪಾರ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಚಾರಿತ್ರಿಕ ಅಧ್ಯಯನ (1947 ರಿಂದ 1990 ರವರೆಗೆ)

ಕ್ರಮ. ಸಂಖ್ಯೆ	ಸೂಚೀಕರಣ	ಪುಟ ಸಂಖ್ಯೆ
1	ಪೀಠಿಕೆ	1
2	ಅಧ್ಯಯನದ ಸ್ವರೂಪ	2
3	ಅಧ್ಯಯನದ ವ್ಯಾಪ್ತಿ	3
4	ಅಧ್ಯಯನದ ಮಹತ್ವ	5
5	ಅಧ್ಯಯನದ ಉದ್ದೇಶ	6
6	ಚಾರಿತ್ರಿಕ ಬರಹಗಳ ಸಮೀಕ್ಷೆ	6
7	ಸಂಶೋಧನೆಯಲ್ಲಿ ಅನುಸರಿಸಲಾಗಿರುವ ಸಂಶೋಧನಾ ಮಾರ್ಗ	7
	ಪರಾಮರ್ಶನ ಗ್ರಂಥಗಳು	10

ರಾಯಚೂರು ಜಿಲ್ಲೆಯ ಉಪ್ಪಾರ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಚಾರಿತ್ರಿಕ ಅಧ್ಯಯನ (1947 ರಿಂದ 1990 ರವರೆಗೆ)

ಪೀಠಿಕೆ: ಕರ್ನಾಟಕದಲ್ಲಿ ಕಂಡುಬರುವ ಅತ್ಯಂತ ಹಿಂದುಳಿದ ಸಮುದಾಯಗಳಲ್ಲಿ ಒಂದು ಪ್ರಮುಖ ಜನಾಂಗವಾದ ಉಪ್ಪಾರ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಅಧ್ಯಯನವು ಆಧುನಿಕೋತ್ತರ ಕರ್ನಾಟಕದ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಯಾವುದೇ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಾನಮಾನವಿಲ್ಲದ ಹಾಗೂ ಅತ್ಯಂತ ನಿರ್ಲಕ್ಷ್ಯಗೆ ಒಳಪಟ್ಟ ಅನೇಕ ಸಣ್ಣಪುಟ್ಟ ಕಾಯಕ ಸಮುದಾಯಗಳಲ್ಲಿ ಉಪ್ಪಾರ ಸಮುದಾಯವು ಸಹ ಒಂದು ಪ್ರಮುಖವಾದುದು. ತಲತಲಾಂತರದಿಂದಲೂ ಉಪ್ಪಿನ ತಯಾರಿಕೆ ಮತ್ತು ಮಾರಾಟವನ್ನೇ ತಮ್ಮ ಜೀವನೋಪಾಯದ ಕುಲಕಸುಬನ್ನಾಗಿ ರೂಢಿಸಿಕೊಂಡು ಬಂದಿರುವ ಉಪ್ಪಾರರು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ನೆಲೆಸಿದ್ದು; ಇವರನ್ನು ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತದೆ. ಉಪ್ಪಾರರನ್ನು ಸಾಮಾನ್ಯವಾಗಿ ಉಪ್ಪಾರ, ಉಪ್ಪಾರಶೆಟ್ಟಿ, ಉಪ್ಪಲಿಗ, ಉಪ್ಪಲಿಗಸೆಟ್ಟಿ, ಸುಣ್ಣಗಾರ, ಸಗರರು ಮೇಲು ಸಕ್ಕರೆಯವರೆಂದೂ ಉತ್ತರ ಕರ್ನಾಟಕದ ರಾಯಚೂರು, ವಿಜಯಪುರ, ಬೆಳಗಾವಿ, ಕಲಬುರ್ಗಿ, ಯಾದಗಿರಿ, ಕೊಪ್ಪಳ, ಹಾವೇರಿ, ಗದಗ, ಬಾಗಲಕೋಟೆ ಮುಂತಾದ ಜಿಲ್ಲೆಗಳಲ್ಲಿ ಬೇಲ್ದಾರ್, ಲೋನಾರಿ, ಗಾವಂಡಿಗಳು ಎಂದೂ ಕರೆಯಲಾಗುತ್ತಿದೆ.

ದಕ್ಷಿಣ ಕರ್ನಾಟಕದ ಬೆಂಗಳೂರು, ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮುಂತಾದ ಜಿಲ್ಲೆಗಳಲ್ಲಿ ಉಪ್ಪಾರ, ಉಪ್ಪಾರಸೆಟ್ಟಿ, ಉಪ್ಪಲಿಗ, ಉಪ್ಪಲಿಗಶೆಟ್ಟಿ ಎಂದೂ ಕರೆಯುತ್ತಾರೆ. ಆರಂಭದಲ್ಲಿ ಅಲೆಮಾರಿಗಳಾಗಿ ಪಶುಪಾಲನಾ ವೃತ್ತಿಯನ್ನು ಕೈಗೊಂಡಿದ್ದ ಈ ಸಮುದಾಯವು ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿತ್ತು. ಎಡ್ಗರ್ಗ್ ಥರ್ಸ್ಟನ್‌ರವರು ಅಭಿಪ್ರಾಯಿಸಿರುವಂತೆ "ಜನರ ಜೀವನ ವಿಧಾನವೇ ಸಂಸ್ಕೃತಿ.ಜನರಿದ್ದ ಕಡೆ ಸಂಸ್ಕೃತಿ ಇದ್ದೇ ಇರುತ್ತದೆ.ಆದರೆ 'ಸಂಸ್ಕೃತಿ' ಒಂದೇ ತೆರನಾದುದಲ್ಲ; ಒಂದೇ ವಿನ್ಯಾಸದ್ದಲ್ಲ. ಒಂದೊಂದು ಪ್ರದೇಶದಲ್ಲಿ ಒಂದೊಂದು ಜನಾಂಗಕ್ಕೆ ಒಂದೊಂದು ರೀತಿಯ ಸಂಸ್ಕೃತಿ ಇರಲು ಸಾಧ್ಯವಿದೆ.ಮನುಷ್ಯ ಸಂಸ್ಕೃತಿಯು ರೂಪುಗೊಳ್ಳುತ್ತಿರುವಾಗ ವಿವಿಧ ಕಾರಣಗಳಿಂದ ವಿಂಗಡಣೆಗೊಳಗಾದ ಮನುಷ್ಯ ಸಮಾಜ, ತನ್ನ ವಿಭಜಿತ ನೆಲೆಗಳಿಗನುಗುಣವಾಗಿ ವಿಭಿನ್ನ ಸಂಸ್ಕೃತಿಗಳನ್ನು ರೂಪಿಸಿಕೊಳ್ಳುತ್ತಾ ಬಂದಿರುವುದು ಒಂದು ಚಾರಿತ್ರಿಕ ಸಂಗತಿಯೇ ಆಗಿದೆ." ವಿವಿಧ ಜನಾಂಗ ಸಮುದಾಯಗಳ ಸಾಮಾಜಿಕ ಉಗಮ ಹಾಗೂ ಸಾಂಸ್ಕೃತಿಕ

ವಿಕಾಶಕ್ಕೆ ಸಂಬಂಧಿಸಿದಂತೆ ರೊಮಿಲಾ ಥಾಪರ್‌ರವರು ಅಭಿಪ್ರಾಯ ಪಟ್ಟಿರುವಂತೆ "ಮನುಷ್ಯ ಸಮಾಜದ ಬೆಳವಣಿಗೆಯ ಹಿಂದೆ ಒಂದು ನಿರ್ದಿಷ್ಟ ಚರಿತ್ರೆಯಿರುವುದರಿಂದ ಸಂಸ್ಕೃತಿಯ ಉಗಮ ಮತ್ತು ಬೆಳವಣಿಗೆಗೆ ಒಂದು ಚರಿತ್ರೆಯಿದೆ." ಜನಾಂಗೀಯ ಇತಿಹಾಸದ ಹಿನ್ನೆಲೆಯಲ್ಲಿ ಉಪ್ಪಾರ ಸಮುದಾಯವು ಬೀದರ್ ಜಿಲ್ಲೆಯಿಂದ ಚಾಮರಾಜನಗರ ಜಿಲ್ಲೆಯವರೆಗೂ ಕರ್ನಾಟಕದ ಎಲ್ಲಾ 31 ಜಿಲ್ಲೆಗಳಲ್ಲೂ ವ್ಯಾಪಕವಾಗಿ ನೆಲೆಸಿದ್ದಾರೆ.ಇತ್ತೀಚಿನ ಜನಗಣತಿ ವರದಿಯಂತೆ ಮೈಸೂರು, ಚಾಮರಾಜನಗರ, ತುಮಕೂರು, ಕೊಪ್ಪಳ, ಧಾರವಾಡ, ಬೆಳಗಾವಿ, ಗುಲ್ಬರ್ಗಾ ಮೊದಲಾದ ಜಿಲ್ಲೆಗಳಲ್ಲಿ ಉಪ್ಪಾರರ ಜನಸಂಖ್ಯೆಯು ಗಣನೀಯ ಪ್ರಮಾಣದಲ್ಲಿರುವುದನ್ನು ಗಮನಿಸಬಹುದು.ರಾಜ್ಯದ ಇಪ್ಪತ್ತೈದು ಜಿಲ್ಲೆಗಳಲ್ಲಂತೂ ಅವರನ್ನು ಕಡೆಗಣಿಸುವಂತಿಲ್ಲ. ಸುಮಾರು 65 ತಾಲ್ಲೂಕುಗಳಲ್ಲಿ ಉಪ್ಪಾರರ ಪ್ರಭಾವ ಹೆಚ್ಚಾಗಿದೆ.

ಅಧ್ಯಯನದ ಸ್ವರೂಪ: ಭಾರತಕ್ಕೆ ಸ್ವಾತಂತ್ರ್ಯ ದೊರೆತು 78 ವರ್ಷಗಳಾಗಿ, ಸಂವಿಧಾನ ಜಾರಿಗೆ ಬಂದು 75 ವರ್ಷಗಳಾಗಿದ್ದರೂ ಉಪ್ಪಾರರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ಅತ್ಯಂತ ಶೋಚನೀಯವಾಗಿವೆ. ಅವರ ಶೈಕ್ಷಣಿಕ ಪ್ರಮಾಣವಂತೂ ಶೇಕಡ 30ನ್ನೂ ಮೀರಿಲ್ಲವೆಂದರೆ ನಮ್ಮ ರಾಜ್ಯದ ವಿವಿಧ ಜಾತಿಜನಾಂಗಗಳು, ಸಮುದಾಯಗಳು ವಿಶೇಷವಾಗಿ ಅತ್ಯಂತ ಹಿಂದುಳಿದ ವರ್ಗಗಳ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಯಾವ ರೀತಿ ಯಶಸ್ವಿಯಾಗಿದೆ ಎಂಬುದನ್ನು ಕಲ್ಯಾಣ ರಾಜ್ಯದ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಊಹಿಸಬಹುದು. ಸಾಮಾಜಿಕವಾಗಿ ಹೇಳುವುದಾದರೆ, 'ಉಪ್ಪಾರ ಸಮಾಜ'ದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಐಕ್ಯಮತ್ಯವಿಲ್ಲ. ಮುಗ್ಧತೆ ಹಾಗೂ ಅರಿವಿನ ಕೊರತೆಯಿಂದಾಗಿ ಈ ಸಮಾಜ ನ್ಯಾಯೋಚಿತವಾಗಿ ಪಡೆಯಬೇಕಾದ ಕನಿಷ್ಠ ಸೌಲಭ್ಯಗಳಿಂದಲೂ ವಂಚಿತವಾಗಿದೆ.ಅದಕ್ಕಾಗಿ ಚಿನ್ನಪ್ಪರೆಡ್ಡಿ ಆಯೋಗದಲ್ಲಿ ಈ ಸಮುದಾಯವನ್ನು ಪ್ರವರ್ಗ–I ಕ್ಕೆ ಸೇರಿಸಿ, ಅನೇಕ ಸೌಲಭ್ಯ ಸವಲತ್ತುಗಳನ್ನು ನೀಡಲಾಗಿದೆ. ಆದುದರಿಂದ ಇವರಿಗೆ ಅನೇಕ ರೀತಿಯ ಆರ್ಥಿಕ ಮತ್ತು ಶೈಕ್ಷಣಿಕ ಸೌಲಭ್ಯಗಳು ದೊರೆಯುವಂತಾಗಿ ಸಮಾಜದ ಮುಖ್ಯ ವಾಹಿನಿಯ ಕಕ್ಷೆಗೆ ಬರುವಂತಾಗಿದೆ.

ಭಾರತದ ಉದ್ದಗಲಕ್ಕೂ ವ್ಯಾಪಿಸಿಕೊಂಡಿರುವ ಉಪ್ಪಾರರು ಬೇರೆ ಬೇರೆ ರಾಜ್ಯಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದ್ದು, ಆಯಾಯ ಪ್ರದೇಶದ ಭಾಷೆಗಳನ್ನಾಡುತ್ತಾರೆ. ಉಪ್ಪಾರ ಜನಾಂಗದ ಸಂಸ್ಕೃತಿಯನ್ನು ಆ ಜನಾಂಗದ ಮೂಲದಿಂದ ಆರಂಭಿಸಿ ಅದರ ಪ್ರಾಚೀನತೆ, ಪದನಿಷ್ಪತ್ತಿ, ಜನಾಂಗದ ಬಗೆಗಿನ ಸೃಷ್ಟಿ ಪುರಾಣಗಳನ್ನು ವಿವಿಧ ಮೂಲಗಳಿಂದ ಕಟ್ಟಿಕೊಡುವುದು, ಇವರ ಕೌಟುಂಬಿಕ ವ್ಯವಸ್ಥೆ,

ವಿವಾಹ ಮುಂತಾದ ಸಾಮಾಜಿಕ ಸಂಸ್ಥೆಗಳ ಬಗೆಗಿನ ವಿವರ, ವಿಶ್ಲೇಷಣೆಗಳು ಅಧ್ಯಯನದ ವ್ಯಾಪ್ತಿಯಲ್ಲಿ ಅಡಕವಾಗಿವೆ. ಉಪ್ಪಾರ ಸಮುದಾಯದ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಗುರುತಿಸಿ ವಿಶ್ಲೇಷಿಸುವುದು. ಈ ಸಂಶೋಧನೆಯ ಪ್ರಧಾನ ವಿಷಯವಾಗಿದೆ. ಉಪ್ಪಾರರು ಹೆಚ್ಚಾಗಿ ವಾಸಿಸುವ, ತನ್ನದೇ ಆದ ಭೌಗೋಳಿಕ ಲಕ್ಷಣಗಳಿಂದ ಕೂಡಿರುವ ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆಯು ಹೈದರಾಬಾದ್ ನಿಜಾಮರು ಹಾಗೂ ಬ್ರಿಟೀಷರ ಆಳ್ವಿಕೆಯ ನಂತರ ಸ್ವತಂತ್ರ ಜಿಲ್ಲೆಯಾಗಿ ರೂಪುಗೊಂಡಿತು. ಈಗ ರಾಯಚೂರು ಜಿಲ್ಲೆಯಲ್ಲಿ ರಾಯಚೂರು, ಮಾನ್ವಿ, ಸಿಂಧನೂರು, ದೇವದುರ್ಗ, ಲಿಂಗಸೂರು, ಸಿರವಾರ, ಮಸ್ಕಿಗಳೆಂಬ 7 ತಾಲ್ಲೂಕುಗಳಿವೆ. ಈ ಏಳು ತಾಲ್ಲೂಕುಗಳಲ್ಲಿ 48 ಹೋಬಳಿಗಳು ಮತ್ತು 950 ಹಳ್ಳಿಗಳಿವೆ. ಈ ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉಪ್ಪಾರ ಸಮುದಾಯದ ವರಿದ್ದಾರೆಂಬುದು ಅತೀ ಮುಖ್ಯವಾದ ಸಂಗತಿಯಾಗಿದೆ.

ಅಧ್ಯಯನದ ವ್ಯಾಪ್ತಿ: ಪ್ರಸ್ತುತ ಸಂಶೋಧನಾ ವಿಷಯವನ್ನು ಕ್ರಿ.ಶ. 1947ರಿಂದ 1990ರವರೆಗೆ ಅಧ್ಯಯನ ಕೈಗೊಳ್ಳಲು ನಿರ್ಧರಿಸಲಾಗಿದೆ.1947ರಲ್ಲಿ ಭಾರತವು ಸ್ವಾತಂತ್ರ್ಯಗೊಂಡಿತು. ಸ್ವಾತಂತ್ರ್ಯದ ತರುವಾಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾಜ ಕಲ್ಯಾಣ ಇಲಾಖೆಯ ಮೂಲಕ ಹಿಂದುಳಿದ, ಅತೀ ಹಿಂದುಳಿದ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು ಮೊದಲಾದ ದುರ್ಬಲ ವರ್ಗಗಳ ಏಳಿಗೆಗಾಗಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಲು ನಿರ್ಧರಿಸಿದವು. ಎಲ್ಲಕ್ಕಿಂತ ಮಿಗಿಲಾಗಿ 1950 ಜನವರಿ 26 ರಂದು ಜಾರಿಗೆ ಬಂದ ಸಂವಿಧಾನದ ಮೂಲಕ ಶೋಷಿತ ವರ್ಗಗಳ ಕಲ್ಯಾಣಕ್ಕೆ ಭರವಸೆಯನ್ನು ಸಹ ನೀಡಲಾಯಿತು. ಈ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡ ಯೋಜನಾ ಆಯೋಗ ಮತ್ತು ಪಂಚವಾರ್ಷಿಕ ಯೋಜನೆಗಳ ಮೂಲಕ ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಪ್ರಗತಿಯನ್ನು ಸಾಧಿಸುವ ಪ್ರಯತ್ನದಲ್ಲಿ ಸ್ವಲ್ಪಮಟ್ಟಿಗಾದರು ಯಶಸ್ಸು ಸಿಕ್ಕಿದೆ.

ಕೇಂದ್ರ ಸರ್ಕಾರದಂತೆ ಕರ್ನಾಟಕ ರಾಜ್ಯ ಸರ್ಕಾರವು ಸಹ ಅನೇಕ ಹಿಂದುಳಿದ ವರ್ಗಗಳ ಆಯೋಗಗಳನ್ನು ನೇಮಿಸಿ, ಆ ಆಯೋಗಗಳ ಶಿಫಾರಸ್ಸುಗಳನ್ನು ಜಾರಿ ಮಾಡಿದ ಫಲವಾಗಿ ಹಿಂದುಳಿದ ಮತ್ತು ಅತೀ ಹಿಂದುಳಿದ ವರ್ಗಗಳಿಗೆ ಸೇರಿದ ಜನರಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಸೌಕರ್ಯಗಳು ಲಭಿಸಿದವು.ಈ ಹಿನ್ನೆಲೆಯಲ್ಲಿ 1960ರಲ್ಲಿ ನಾಗನಗೌಡ ಸಮಿತಿ, 1972ರಲ್ಲಿ ಎಲ್.ಜಿ.ಹಾವನೂರ್ ಸಮಿತಿ, 1985ರಲ್ಲಿ ಟಿ.ವೆಂಕಟಸ್ವಾಮಿ ಸಮಿತಿ, 1990ರಲ್ಲಿ ಚಿನ್ನಪ್ಪ ರೆಡ್ಡಿ ಸಮಿತಿ ಮುಂತಾದ ಹಿಂದುಳಿದ ವರ್ಗಗಳ ಆಯೋಗಗಳನ್ನು ನೇಮಿಸಿ, ಈ ಆಯೋಗಗಳು ಮಾಡಿದ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಜಾರಿಗೆ ತರುವುದರಲ್ಲಿ ಯಶಸ್ವಿಯಾಗದಿದ್ದರೂ 1994ರಲ್ಲಿ ಕೆಲವು

ಮಾರ್ಪಾಡುಗಳೊಂದಿಗೆ ಅನುಷ್ಠಾನಕ್ಕೆ ತಂದು ಸ್ವಲ್ಪ ಮಟ್ಟಿಗಾದರೂ ಯಶಸ್ಸು ಪಡೆಯಿತೆನ್ನಬಹುದು. ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನೆಯನ್ನು 1994ರವರೆಗೆ ನಿಗದಿಪಡಿಸಲಾಗಿದೆ. ಈ ಮೇಲ್ಕಂಡ ಚರ್ಚೆಯ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ವಿಷಯವನ್ನು ಒಟ್ಟು ಏಳು ಅಧ್ಯಾಯಗಳಾಗಿ ವಿಂಗಡಿಸಿಕೊಂಡು ಅಧ್ಯಯನ ನಡೆಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ, ಅಧ್ಯಯನದ ಮಹತ್ವ, ಅಧ್ಯಯನದ ಉದ್ದೇಶ, ಚಾರಿತ್ರಿಕ ಬರಹಗಳ ಸಮೀಕ್ಷೆ, ಸಂಶೋಧನಾ ವಿಧಾನ, ಆಕರಗಳು–ಪ್ರಾಥಮಿಕ, ಅನುಷಂಗಿಕ ಆಧಾರಗಳು, ಅನುಭವಾತ್ಮಕ ಅಧ್ಯಯನ, ಪರಿಮಣಾತ್ಮಕ ವಿಧಾನ ಮತ್ತು ಮೌಖಿಕ ಚರಿತ್ರೆಯ ಮಾದರಿಗಳು (ಕ್ಷೇತ್ರ ಕಾರ್ಯ) ಮುಂತಾದವುಗಳ ಅಳವಡಿಕೆಗಳನ್ನು ಕುರಿತು ವಿವರಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ರಾಯಚೂರು ಜಿಲ್ಲೆಯ ಸಂಕ್ಷಿಪ್ತ ಚರಿತ್ರೆಯನ್ನು ಕುರಿತು ಭಾರತ ಹಾಗೂ ಕರ್ನಾಟಕ ಇತಿಹಾಸದ ಹಿನ್ನೆಲೆಯಲ್ಲಿ ವಿಶೇಷವಾಗಿ ಭೌಗೋಳಿಕ ಲಕ್ಷಣಗಳ ಪ್ರಭಾವದೊಂದಿಗೆ ಪರಿಶೀಲಿಸಲಾಗಿದೆ. ರಾಯಚೂರು ಜಿಲ್ಲೆಯ ಉಪ್ಪಾರ ಸಮುದಾಯದವರ ಆರ್ಥಿಕ ಮತ್ತು ಸಾಮಾಜಿಕ ಜೀವನವನ್ನು ಕುರಿತು ಚರ್ಚಿಸುವ ಸಂಬಂಧ ಕರ್ನಾಟಕ ರಾಜ್ಯಾದಾದ್ಯಂತ ನೆಲೆಸಿರುವ ಉಪ್ಪಾರರ ಜೀವನ ಕ್ರಮ ಹಾಗೂ ಸಂಪ್ರದಾಯಗಳನ್ನು ಕುರಿತು ಚಾರಿತ್ರಿಕ ವಿವರಣೆ ನೀಡಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಉಪ್ಪಾರ ಸಮುದಾಯದ ಪ್ರಾಚೀನತೆ, 'ಉಪ್ಪಾರ' ಪದದ ನಿಷ್ಪತ್ತಿ, ಅರ್ಥ ಹಾಗೂ ಉಪ್ಪಾರರ ಮೂಲವನ್ನು ಕುರಿತು ಪೌರಾಣಿಕ, ಜಾನಪದೀಯ ಹಾಗೂ ಚಾರಿತ್ರಿಕ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ.ಉಪ್ಪಾರರ ಕುಲ ವೃತ್ತಿಯ ಸ್ವರೂಪದೊಂದಿಗೆ ಉಪ್ಪಿನ ತಯಾರಿಕೆಯನ್ನು ಚಾರಿತ್ರಿಕ ಹಿನ್ನೆಲೆಯೊಂದಿಗೆ ಚರ್ಚಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಉಪ್ಪಾರ ಸಮುದಾಯದ ಆರ್ಥಿಕ ಚಟುವಟಿಕೆಗಳು, ಬೇಟೆ, ಪಶುಪಾಲನೆ, ಉಪ್ಪಾರರ ಕಸುಬು/ವೃತ್ತಿ ವಿಶಿಷ್ಟತೆ, ಉಪ್ಪು ತಯಾರಿಕೆ ಮತ್ತು ಮಾರಾಟದ ಮಹತ್ವ, ಉಪ್ಪಾರರು ತೊಡಗಿಸಿಕೊಂಡಿರುವ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು, ವಿಶೇಷವಾಗಿ ವಸಾಹತುಶಾಹಿ ಆಳ್ವಿಕೆ ಹಾಗೂ ಇತ್ತೀಚಿನ ಜಾಗತೀಕರಣದ ಪ್ರಭಾವದಿಂದ ಉಪ್ಪಾರರ ವೃತ್ತಿ ಬದುಕಿನ ಮೇಲೆ ಉಂಟಾದ ಪರಿಣಾಮಗಳನ್ನು ಆರ್ಥಿಕ ಸ್ಥಿತ್ಯಂತರವನ್ನು ಅನ್ವಯಿಸಿ ಪರಾಮರ್ಶಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಉಪ್ಪಾರ ಸಮುದಾಯದ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು, ಪ್ರಕೃತಿ ಆರಾಧನೆ, ಪೌರಾಣಿಕ ನಂಬಿಕೆ ಮತ್ತು ಆಚರಣೆಗಳು, ಜಾನಪದೀಯ ಹಾಗೂ ಇತರ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು ಇತ್ಯಾದಿಗಳನ್ನು ಕುರಿತು ಪರಿಶೀಲಿಸಲಾಗಿದೆ.

ಉಪ್ಪಾರರ ಒಟ್ಟು ಸಾಮಾಜಿಕ ಬದುಕಿನ ಸಂದರ್ಭದಲ್ಲಿ ಆಗಿರುವ ಸಾಂಸ್ಕೃತಿಕ ಸ್ಥಿತ್ಯಂತರ ಮತ್ತು ಪಲ್ಲಟಗಳನ್ನು ಆಧುನೀಕರಣ, ಜಾಗತೀಕರಣ, ಕೈಗಾರೀಕರಣ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ. ಜೊತೆಗೆ ಬದಲಾದ ಕಾಲಘಟ್ಟದಲ್ಲಿ ಅವಲಂಭಿತ ವೃತ್ತಿಗಳ ಹಿನ್ನೆಲೆಯಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತು ಚರ್ಚಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಉಪ್ಪಾರ ಸಮುದಾಯದ ಸಾಮಾಜಿಕ ಜೀವನಕ್ಕೆ ಸಂಬಂಧಿಸಿದಂತೆ ಕುಟುಂಬ ಪದ್ಧತಿ, ಜನನ, ನಾಮಕರಣ, ಚೌಲ, ಋತುಮತಿ, ಮದುವೆ, ಮರಣ, ಜಾತಿ ಸ್ವೀಕಾರ, ಬಹಿಷ್ಕಾರ ಮುಂತಾದ ವಿವರಗಳೊಂದಿಗೆ ಉಪ್ಪಾರ ಸಮುದಾಯದ ಸಾಮಾಜಿಕ ವ್ಯವಸ್ಥೆ, ಕುಟುಂಬ ಪದ್ಧತಿ, ಉಪ್ಪಾರ ಸಮುದಾಯದ ಒಳಪಂಗಡಗಳು, ಆಹಾರ ಪದ್ಧತಿ, ಉಡುಗೆತೊಡುಗೆ, ನ್ಯಾಯಪದ್ಧತಿ, ಇತರೆ ಸಾಮಾಜಿಕ ಪದ್ಧತಿಗಳು, ಜೀವನಾವರ್ತನ ಮತ್ತು ವಾರ್ಷಿಕಾವರ್ತನ ಆಚರಣೆಗಳು, ಮಹಿಳೆಯರ ಸ್ಥಾನಮಾನ, ಉಪ್ಪಾರರ ಸಾಂಸ್ಕೃತಿಕ ಪರಂಪರೆ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರಗಳು ಮೊದಲಾದವುಗಳ ಚಿತ್ರಣವನ್ನು ಕಟ್ಟಿಕೊಡಲಾಗುವುದು. ಸಂಸ್ಕೃತಿಯನ್ನು ಕುರಿತಂತೆ ವಿವಿಧ ವಿದ್ವಾಂಸರುಗಳ ವ್ಯಾಖ್ಯಾನಗಳೊಂದಿಗೆ ಸಂಸ್ಕೃತಿ ನಿರ್ವಚನವನ್ನು ಚರ್ಚಿಸಲಾಗಿದೆ.ಸಂಸ್ಕೃತಿಯ ಗ್ರಹಿಕೆಗಳನ್ನು ಅನುಲಕ್ಷಿಸಿ ಸಂಸ್ಕೃತಿಯ ನಿರ್ವಚನದಲ್ಲಿ ಸ್ಪಷ್ಟ ನಿರ್ಧಾರವನ್ನು ಮಾಡಲಾಗಿದೆ ಹಾಗೂ ಉಪ್ಪಾರರ ಭೌತಿಕ ಸಂಸ್ಕೃತಿಯ ವಿವರಗಳನ್ನು ವಿಶ್ಲೇಷಣೆಯ ಮುಖೇನ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಧ್ಯಾಯ ಏಳರಲ್ಲಿ ರಾಯಚೂರು ಜಿಲ್ಲೆಯ ಉಪ್ಪಾರ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತ್ಯಂತರದ ವಿವಿಧ ಪ್ರಕ್ರಿಯೆಗಳನ್ನು ಅನುಭವಾತ್ಮಕ ಅಧ್ಯಯನ ಮತ್ತು ಪರಿಮಣಾತ್ಮಕ ಮಾದರಿಗಳನ್ನು ಅನ್ವಯಿಸಿಕೊಂಡು ಕೋಷ್ಟಕ, ಅಂಕಿಅಂಶ ಮುಂತಾದವುಗಳ ಸಮೇತ ವಿಶ್ಲೇಷಣೆ ಮಾಡಲಾಗಿದೆ. ಕೊನೆಯ ಅಧ್ಯಾಯದಲ್ಲಿ ಒಟ್ಟು ಅಧ್ಯಯನದಿಂದ ಹೊರ ಹೊಮ್ಮಿದ ಫಲಿತಾಂಶಗಳನ್ನು ಉಪಸಂಹಾರದ ರೂಪದಲ್ಲಿ ಚರ್ಚಿಸಲಾಗಿದೆ. ಕೊನೆಯ ಭಾಗವಾದ ಅನುಬಂಧದಲ್ಲಿ ಕ್ಷೇತ್ರಕಾರ್ಯದ ಸಂದರ್ಭಗಳಲ್ಲಿ ಸಂಗ್ರಹಿಸಿದ ಸಮಗ್ರ ಮಾಹಿತಿಗಳ ವಿವರಗಳನ್ನು ನೀಡಲಾಗಿದೆ. ಜೊತೆಗೆ ಗ್ರಂಥಪಟ್ಟಿ ಮತ್ತು ಛಾಯಾಚಿತ್ರಗಳನ್ನು ಸಹ ಸೇರಿಸಲಾಗಿದೆ.

ಅಧ್ಯಯನದ ಮಹತ್ವ: ಪ್ರಸ್ತುತ ಅಧ್ಯಯನದ ಮಹತ್ವವೇನೆಂದರೆ ಅತ್ಯಂತ ನಿರ್ಲಕ್ಷ್ಯತೆ ಹಾಗೂ ತಿರಸ್ಕಾರಕ್ಕೆ ಒಳಪಟ್ಟ ಮತ್ತು ಅತ್ಯಂತ ಹಿಂದುಳಿದ ಉಪ್ಪಾರ ಸಮುದಾಯದ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ವಿಶೇಷವಾಗಿ ಹಿಂದುಳಿದ ಜಿಲ್ಲೆಗಳನ್ನು ಒಳಗೊಂಡಿರುವ ಹೈದ್ರಾಬಾದ ಕರ್ನಾಟಕದ ರಾಯಚೂರು ಜಿಲ್ಲೆಗೆ ಅನ್ವಯಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಏಕೆಂದರೆ 12ನೆಯ ಶತಮಾನದಲ್ಲಿ ಕಲ್ಯಾಣದಲ್ಲಿ ಸಂಭವಿಸಿದ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿಯಾದ

ನಂತರ ವೀರಶೈವ ಧರ್ಮವು ಹೊಸ ಸ್ವರೂಪವನ್ನು ಪಡೆಯಿತು. ಜನತೆಯಲ್ಲಿ ಆಧ್ಯಾತ್ಮಿಕತೆ ಹಾಗೂ ನೈತಿಕ ಮೌಲ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಅವರ ಸಂಘಟನೆಯ ಹೊಣೆಗಾರಿಕೆಯೊಂದಿಗೆ ಅತ್ಯಂತ ಹಿಂದುಳಿದ ಮತ್ತು ಕಾಯಸ್ಥ ಸಮುದಾಯಗಳ ವಿಮೋಚನೆಗಾಗಿ ಶ್ರಮ ಶಕ್ತಿಯನ್ನು ಪ್ರೋತ್ಸಾಹಿಸಿ ಎತ್ತಿ ಹಿಡಿಯುವ ಜವಾಬ್ದರಿಯನ್ನು ಸಹ ವಹಿಸಿಕೊಂಡಿತು. ಸತ್ಪರಿಣಾಮವಾಗಿ ಹಿಂದುಳಿದವರಿಗೆ ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳಲ್ಲಿ ಮಾರ್ಗದರ್ಶನ ನೀಡುವುದಲ್ಲದೆ; ಸಂಘಟನೆಯಿಂದ ಪಡೆಯಬಹುದಾದ ಲೌಕಿಕ ವಿಚಾರಗಳ ಸಾಧನೆಯತ್ತ ತಮ್ಮ ಸಮಾಜವನ್ನು ಜಾಗೃತಿಗೊಳಿಸಿದರು.

ಅಧ್ಯಯನದ ಉದ್ದೇಶ: ಕರ್ನಾಟಕದ ಅತ್ಯಂತ ಹಿಂದುಳಿದ ಮತ್ತು ಕಾಯಸ್ಥ ವರ್ಗಗಳಲ್ಲಿ ಉಪ್ಪಾರ ವರ್ಗವೂ ಒಂದು. 1994 ರಲ್ಲಿ ಜಾರಿಗೆ ಬಂದ ಚಿನ್ನಪ್ಪರೆಡ್ಡಿ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನ ಮೇರೆಗೆ ಉಪ್ಪಾರರನ್ನು ಪ್ರವರ್ಗ–1ಕ್ಕೆ ಸೇರಿಸುವುದರ ಮೂಲಕ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ದೊರೆಯುವ ಎಲ್ಲಾ ಶೈಕ್ಷಣಿಕ ಹಾಗೂ ಉದ್ಯೋಗ ಸೌಲಭ್ಯಗಳು ಈ ಸಮುದಾಯಕ್ಕೆ ದೊರೆಯಬೇಕೆಂದು ಸೂಚಿಸಿದೆ. ಕರ್ನಾಟಕ ರಾಜ್ಯಾದ್ಯಂತ ಎಲ್ಲಾ ಪ್ರದೇಶಗಳಲ್ಲಿ ಉಪ್ಪಾರ ಜನಾಂಗ ಹರಡಿಕೊಂಡಿರುವುದನ್ನು ನೋಡಬಹುದು. ಉಪ್ಪು ತಯಾರಿಕೆ ಇವರ ಮೂಲ ಕಸಬಾಗಿದ್ದರಿಂದ ಇವರಿಗೆ ಉಪ್ಪಾರರು ಎಂಬ ಹೆಸರು ಉಂಟಾಯಿತು. ಕರ್ನಾಟಕದಲ್ಲಿ ಚೌಳು ಮಣ್ಣಿನ ಗುಡ್ಡೆಗಳಿದ್ದ ಸ್ಥಳಗಳಲ್ಲಿ ಹೆಚ್ಚಾಗಿ ಉಪ್ಪಾರರ ವಸತಿಗಳು ಕಾಣಬರುತ್ತವೆ. ಉಪ್ಪಿನಂಶ ತುಂಬಿದ್ದ ಸವಳು ಅಥವಾ ಚೌಳು ಮಣ್ಣನ್ನು ಬಳಸಿ ಉಪ್ಪನ್ನು ತಯಾರಿಸುತ್ತಿದ್ದರು. ಇದೇ ಮಣ್ಣುಪ್ಪು.ಇದು ಐತಿಹಾಸಿಕವಾಗಿ ಸಾವಿರಾರು ವರ್ಷಗಳಿಂದ ಇವರ ಕಸಬಾಗಿದ್ದಿತು. ಆ ಕಾರಣ ಇವರನ್ನು ಉಪ್ಪಾರ ಎಂಬುದಾಗಿ ಗುರುತಿಸಲಾಗುತ್ತಿದ್ದಿತು.

ಚಾರಿತ್ರಿಕ ಬರಹಗಳ ಸಮೀಕ್ಷೆ: ಉಪ್ಪಾರ ಸಮುದಾಯದ ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಹಾಗೂ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಕುರಿತು ಅನೇಕ ಸಮಾಜಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು, ಇತಿಹಾಸಕಾರರು, ಸಾಹಿತ್ಯ ವಿದ್ವಾಂಸರ ಬರವಣಿಗೆಗಳಿಂದ ಹಲವು ಮಾಹಿತಿಗಳು ಸಿಗುತ್ತವೆ. ಅವುಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಕಳೆದ 19ನೆಯ ಶತಮಾನದ ಕೊನೆ ಮತ್ತು 20ನೆಯ ಶತಮಾನದ ಆರಂಭದ ದಶಕಗಳಿಂದ ಮಾನವ ಸಮಾಜ ಮತ್ತು ಅವನು ರೂಢಿಸಿಕೊಂಡಿದ್ದ ವ್ಯವಸ್ಥೆಗಳ ಅಧ್ಯಯನ ತೀವ್ರಗತಿಯಲ್ಲಿ ನಡೆಯಲಾರಂಭಿಸಿತು. ಇತ್ತೀಚೆಗೆ ಮಾನವಶಾಸ್ತ್ರಜ್ಞರು, ಪುರಾತತ್ವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ವಿಶೇಷ ಆಸಕ್ತಿ ತಳೆದು ವಿವಿಧ ಸಮಾಜಗಳ ಜನಾಂಗೀಯ ಅಧ್ಯಯನ ಕೈಗೊಂಡು ಅವು ರೂಢಿಸಿಕೊಂಡಿರುವ ಸಂಸ್ಕೃತಿ ಮತ್ತು ಸಾಮಾಜಿಕ

ವ್ಯವಸ್ಥೆಗಳ ವೈಶಿಷ್ಟ್ಯತೆಗಳನ್ನು ಗುರುತಿಸಿದ್ದಾರೆ. ಹೀಗೆ ಭಾರತದಲ್ಲಿ ಸಮಾಜ ಮತ್ತು ಮಾನವಶಾಸ್ತ್ರಜ್ಞರು ವಿವಿಧ ಸಂಸ್ಕೃತಿ ಸಮೂಹಗಳನ್ನು ಕುರಿತು ಅಧ್ಯಯನ ನಡೆಸಿ ಜನಾಂಗೀಯ ಅಥವಾ ಸಮುದಾಯದ ಸಂಸ್ಕೃತಿಯನ್ನು ತಿಳಿದುಕೊಳ್ಳುವುದು ಮತ್ತು ಆ ಮೂಲಕ ಒಟ್ಟು ಮಾನವ ಸಂಸ್ಕೃತಿಯ ಸ್ವರೂಪವನ್ನು ತಿಳಿದುಕೊಳ್ಳುವುದು ಈ ಬಗೆಯ ಅಧ್ಯಯನಗಳ ಉದ್ದೇಶವಾಗಿತ್ತು.

ಬ್ರಿಟೀಷರು ಭಾರತದಲ್ಲಿ ಆಳ್ವಿಕೆಯನ್ನು ಆರಂಭಿಸಿದ ನಂತರ ಅವರಿಗೆ ಇಲ್ಲಿಯ ಸಂಸ್ಕೃತಿಯನ್ನು ಪರಿಚಯ ಮಾಡಿಕೊಳ್ಳುವ ಅಗತ್ಯ ಕಂಡು ಬಂದಿತು. ಅದಕ್ಕಾಗಿ ಬೇರೆ ಬೇರೆ ಜನಪದ ಗುಂಪುಗಳ ಮತ್ತು ಪಂಗಡಗಳ ಅಧ್ಯಯನಕ್ಕೆ ಸಮಾಜವಿಜ್ಞಾನಿಗಳು ಮತ್ತು ಮಾನವಶಾಸ್ತ್ರಜ್ಞರನ್ನು ನೇಮಿಸಿದರು. ಹೀಗೆ ನೇಮಕವಾದ ಸಂಶೋಧಕರು ಬೇರೆ ಬೇರೆ ರಾಜ್ಯಗಳಲ್ಲಿನ ಜಾತಿ ಮತ್ತು ಬುಡಕಟ್ಟುಗಳ ಅಧ್ಯಯನವನ್ನು ಸ್ಥೂಲವಾಗಿ ನಡೆಸಿದರು. ಹೀಗೆ ಭಾರತದಲ್ಲಿ ಜನಾಂಗೀಯ ಹಾಗೂ ಸಮುದಾಯ ಸಂಸ್ಕೃತಿಗಳ ಅಧ್ಯಯನಗಳು ಆರಂಭವಾದ ಬಗೆಯನ್ನು ಸ್ಥೂಲವಾಗಿ ಗುರುತಿಸಬಹುದಾಗಿದೆ. ಇತ್ತೀಚೆಗೆ ಅನೇಕ ವಿಶ್ವವಿದ್ಯಾನಿಲಯಗಳು ಮತ್ತು ಸಂಶೋಧನಾ ಕೇಂದ್ರಗಳಲ್ಲಿ ವಿವಿಧ ಸಮುದಾಯ ಹಾಗೂ ಜನಾಂಗಗಳನ್ನು ಕುರಿತಂತೆ ಎಂ.ಫಿಲ್ ಮತ್ತು ಪಿಎಚ್.ಡಿ. ಪದವಿಗಳಿಗಾಗಿ ಅಧ್ಯಯನಗಳು ನಡೆಯುತ್ತಿವೆ. ಅನೇಕ ಸಂಘ ಸಂಸ್ಥೆಗಳು ಆಯಾ ಜಾತಿಗಳಿಗೆ ಸಂಬಂಧಪಟ್ಟಂತೆ ಸ್ಮರಣ ಸಂಚಿಕೆಗಳನ್ನು, ಅಭಿನಂದನಾ ಗ್ರಂಥಗಳನ್ನು ಹಾಗೂ ಕೆಲವರು ಸ್ವಇಚ್ಛೆಯಿಂದ ಆಯಾ ಜಾತಿಗಳ ಮತ್ತು ಬೇರೆ ಬೇರೆ ಜಾತಿಜನಾಂಗಗಳಿಗೆ ಸಂಬಂಧಪಟ್ಟಂತಹ ಪರಿಚಯಾತ್ಮಕ ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ.

ಸಂಶೋಧನೆಯಲ್ಲಿ ಅನುಸರಿಸಲಾಗಿರುವ ಸಂಶೋಧನಾ ಮಾರ್ಗ: ಇತಿಹಾಸ ಸಂಶೋಧನೆಯಲ್ಲಿ ಮಾರ್ಗದರ್ಶನ ಮಾಡುವುದಕ್ಕಾಗಿಯೇ ಇತಿಹಾಸ ಸಂಶೋಧನಾ ಮಾರ್ಗ ಎಂಬ ಒಂದು ಪ್ರತ್ಯೇಕವಾದ ಶಾಸ್ತ್ರವೇ ಬೆಳೆದು ಬಂದಿರುವುದರಿಂದ ಆ ಸೂತ್ರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ದತ್ತಾಂಶಗಳ ಸಂಗ್ರಹಣೆ, ಬಾಹ್ಯ ಮತ್ತು ಆಂತರಿಕ ವಿಮರ್ಶೆಯ ಸೂತ್ರಗಳು, ವಿಶ್ಲೇಷಣಾ ವಿಧಿಗಳು, ಜೋಡಣಾ ವಿಧಾನ, ನಿರೂಪಣಾ ತತ್ವವನ್ನು ಮತ್ತು ಸಂಪಾದನಾ ಕ್ರಮ ಮುಂತಾದವುಗಳನ್ನು ಪ್ರಸ್ತುತ ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ವಿಶೇಷವಾಗಿ ಕ್ಷೇತ್ರ ಕಾರ್ಯವನ್ನು ಕೈಗೊಂಡು ಪ್ರಶ್ನಾವಳಿಯೊಂದಿಗೆ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಕ್ಷೇತ್ರ ಕಾರ್ಯದ ಅಧ್ಯಯನದಲ್ಲಿ ವಿಶೇಷವಾಗಿ ತೊಡಗಿಸಿಕೊಂಡು ರಾಯಚೂರು ಜಿಲ್ಲೆಯಲ್ಲಿ ದೊರಕುವ ಎಲ್ಲಾ ಬಗೆಯ ಚಾರಿತ್ರಿಕ ಆಧಾರಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ. ಮಾರ್ಗದರ್ಶಕರೊಂದಿಗೆ ಚರ್ಚಿಸಿ; ಕ್ಷೇತ್ರಕಾರ್ಯಕ್ಕೆ

ಸಂಬಂಧಿಸಿದಂತೆ ವಿಷಯ ಸಂಗ್ರಹಣೆಯ ಕ್ರಮ ಮತ್ತು ಪ್ರಶ್ನಾವಳಿಯ ಮಾದರಿಯನ್ನು ಸಿದ್ಧಮಾಡಿಕೊಳ್ಳಲಾಯಿತು. ಸ್ಥಳೀಯ ಮಾರ್ಗದರ್ಶಕ ವಿದ್ವಾಂಸರು ಹಾಗೂ ಗ್ರಂಥಾಲಯಗಳ ಮತ್ತು ವಸ್ತು ಸಂಗ್ರಹಾಲಯಗಳ ಭೇಟಿಯು ಕ್ಷೇತ್ರ ಕಾರ್ಯ ಅಧ್ಯಯನಕ್ಕೆ ಅತ್ಯವಶ್ಯಕ.

ಮರುವಿಂಗಡಣೆ ಮಾಡಿ ಪ್ರತ್ಯೇಕಿಸಲಾದ ಜಾತಿಗಳ ವಿವರ ಹೀಗಿದೆ: 1. ಭಟ್ರಾಜು, 2. ಬೊಗಾಡ್-ಬೊಗಡಿ, ಬಗಡಿ, ಬಗೋಡಿ, ಬಗಲಿ, ಬೊಗೊಡಿ 3. ಗೋಸಾವಿ-ಗೋಸಾಯಿ, ಅತಿತ್ 4. ಗೂರ್ಖ, 5.ಗಂಗಾಕುಲ-ಗಂಗೆಮಕ್ಕಳು, ಗಂಗಾಮತ, ಗಂಗಾಪುತ್ರ, ಗೌರಿಮತ, ಅಂಬಿಗ, ಬೆಸ್ತ, ಕಬ್ಬಲಿಗ, ಕಬ್ಬಿಲಿ, ಕಬ್ಬೇರ್, ಕಬ್ಬೇರ, ಕೋಳಿ, ಖರ್ವಿ, ಭೋಯಿ, ಥೊರೆಯ, ಹರತಂತ್ರ, ಮೀನಾಗರ್, ಮೊಗವೀರ, ಸುಣ್ಣಗಾರ, ಸಿವಿಯರ್, 6.ಕಟಿಕ್-ಖಟಿಕ್ ಸೂರ್ಯವಂಶ ಕ್ಷತ್ರಿಯ (1977ರಲ್ಲಿ ಇದು ಪರ್ಯಾಯ ಪದವಾಗಿರಲಿಲ್ಲ) ಆರಯ್, 7.ಕೊಲಯನ್-ಉರಲಿ (ಗೊಲ್ಲ ಜಾತಿಗೆ ಪರ್ಯಾಯ ಪದವಾಗಿ) 8.ಕಲಾಯಿರಿ-ಕೊಲಾರಿ 9.ಕೊಲ್ಲ-ಕೊಲಾಲ, 10. ಕೊಚಾರಿ, 11. ಕುಡುಬಿ, 12. ಕುರ್ಮಾ-ಕುರ್ಮಿ, 13.ಮುಧರ್, 14.ಒಟ್ಟಾರಿ (ಉಪ್ಪಾರಕ್ಕೆ ಪರ್ಯಾಯವಾಗಿ) 15. ರಾವತ್-ರಾಯರಾವತ್,16. ಥಿಲಾರಿ-ತಿರಲಿ, 17.ಉಪ್ಪಾರ- ಉಪ್ಪೇರ, ಉಪ್ಪಿಲಿಯನ್, ಬೆಲ್ದರ್, ಸಾಗರ, ಚುನಾರ್, ಗವಂಡಿ, ಗೊವಂಡಿ, ಗವಡಿ, ಗೌಡಿ, ಗೌಂಡಿ, ಮೇಲುಸಕ್ಕರೆ ಮತ್ತು 18.ಯೆಕ್ಲರ್-ಯೆಕ್ಕಲಿ (ಉಪ್ಪಾರ ಜಾತಿಗೆ ಪರ್ಯಾಯವಾಗಿ) ಈ ಜಾತಿಗಳನ್ನು ಪ್ರವರ್ಗ-Iಕ್ಕೆ ಸೇರಿಸಲಾಗಿದೆ. ಇದೇ ರೀತಿ 'ಹಿಂದುಳಿದ ವರ್ಗ'ದಲ್ಲಿದ್ದು; ಆನಂತರ ಗುಂಪು'ಬಿ'ಯಲ್ಲಿದ್ದ ಬಲಿಜ-ಬಲಜಿಗ, ನಾಯ್ಡು, ಬೋಗಮ್ ತೆಲುಗ, ತೆಲುಗು ಬಲಿಜ, ಸೆಟ್ಟಿ ಬಲಿಜ, ಕಸ್ಬನ್, ಮುನ್ನೂರ್, ಮುನ್ನಾರ್, ಮುತ್ರಾಸಿ, ಮತ್ರಚ, ಜನಪ್ಪನ್, ಬಳೆಗಾರ ಮತ್ತು ಒಕ್ಕಲಿಗರ ಪರ್ಯಾಯ ಪದವಾಗಿದ್ದು ಸರ್ಪ ಒಕ್ಕಲಿಗ ಮುಂತಾದ ಜಾತಿಗಳನ್ನು ಪ್ರವರ್ಗ-IIIಬಿಗೂ, ಮೊದಲು ಹಿಂದುಳಿದ ಮತದಲ್ಲಿದ್ದು ಆ ನಂತರ ಗುಂಪು ಸಿ ಯಲ್ಲಿದ್ದ ಮುಸ್ಲಿಂ ಸಮುದಾಯವನ್ನು ಪ್ರವರ್ಗ-II ಬಿಗೂ ಸೇರಿಸಲಾಗಿದೆ. ಮುಸ್ಲಿಂ ಜನಾಂಗಕ್ಕಾಗಿಯೇ ಪ್ರತ್ಯೇಕವಾಗಿ IIಬಿಯಲ್ಲಿ ಶೇಕಡ 4ರಂತೆ III ಎಗೆ ಶೇಕಡ 5ರಂತೆ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಒಟ್ಟು 523 ಹಳ್ಳಿಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯ ಆಧಾರದ ಮೇಲೆ ಭೂಮಿ ಇಲ್ಲದ ಕಾರ್ಮಿಕರು, ನಿವೇಶನ ಅಥವಾ ಭೂಮಿ ಎರಡೂ ಇಲ್ಲದ ಜನರ ಸಮೀಕ್ಷೆಗಳನ್ನು ಇನ್ನಿತರ ಹಲವಾರು ವೈಜ್ಞಾನಿಕ ವಿಧಾನಗಳೊಂದಿಗೆ ಕೈಗೊಂಡು ಯಾವುದೇ ಒಂದು ಜಾತಿಜನಾಂಗದ ಹಿಂದುಳಿದಿರುವಿಕೆಯನ್ನು ಮತ್ತು ಮುಂದಿರುವಿಕೆಯನ್ನು ಗುರುತಿಸಲಾಯಿತು. ಆ ಪ್ರಕಾರ ಸುಮಾರು

32 ಜಾತಿಗಳು ಮುಂದುವರಿದ ಜಾತಿಗಳೆಂಬುದನ್ನು ಗಮನಿಸಿ, 3ನೇ ಹಿಂದುಳಿದ ಆಯೋಗವು ಒಂದೆಡೆ ಪಟ್ಟಿ ಮಾಡಿತು. ಹಿಂದುಳಿದ ಹಾಗೂ ಅತಿ ಹಿಂದುಳಿದ ವರ್ಗಗಳಿಗೆ ಸೇರಿದ ಜಾತಿಜನಾಂಗಗಳ ಮುಂದುವರಿಕೆಗಾಗಿ ವಿವಿಧ ಯೋಜನೆಗಳ ಮೂಲಕ ಮತ್ತು ಹಲವಾರು ಜನಪರ ಕಾರ್ಯಕ್ರಮಗಳನ್ನು ಹಲವು ವರ್ಷಗಳಿಂದ ಜಾರಿಗೊಳಿಸಲಾಗುತ್ತಿದೆ. ಈ ಕಲ್ಯಾಣ ಕಾರ್ಯಕ್ರಮಗಳಿಂದ ಅತಿ ಹಿಂದುಳಿದ ವರ್ಗಗಳ ಹಿಂದುಳಿದಿರುವಿಕೆಯು ಯಾವ ಪ್ರಮಾಣದಲ್ಲಿ ಪರಿಹಾರವಾಗಿದೆ ಮತ್ತು ಎಷ್ಟರ ಮಟ್ಟಿಗೆ ಈ ವರ್ಗಗಳ ಜೀವನ ಮಟ್ಟವು ಸುಧಾರಿಸಿದೆ ಎಂಬುದರ ಬಗ್ಗೆ ಸೂಕ್ತ ಹಾಗೂ ನಿಖರವಾದ ಅಧ್ಯಯನ ನಡೆಸಿ; ವಾಸ್ತವಿಕವಾಗಿ ಸುಧಾರಣೆಗೊಂಡು ಮುಂದುವರೆದಿರುವ ಸಮುದಾಯಗಳನ್ನು ಮೀಸಲಾತಿ ಪಟ್ಟಿಯಿಂದ ಹೊರಗಿಟ್ಟು; ಮುಂದುವರೆದ ಸಮುದಾಯಗಳೊಡನೆ ಉಪ್ಪಾರ ಸಮುದಾಯದಂತಹ ಅತಿ ಹಿಂದುಳಿದ ವರ್ಗಗಳು ಸ್ಪರ್ಧಿಸಿ ಗೆಲ್ಲುವ ಭರವಸೆ ಮತ್ತು ಆತ್ಮ ವಿಶ್ವಾಸವನ್ನು ತುಂಬುವ ಕಾರ್ಯವೂ ಅಗತ್ಯವಾಗಿ ಆಗಬೇಕಾಗಿದೆ. ಕೇವಲ ಆರ್ಥಿಕ ಯೋಜನೆಗಳ ಘೋಷಣೆ ಮತ್ತು ಅಂಕಿ ಅಂಶಗಳ ಪ್ರಕಟಣೆಗಳಿಂದ ಪ್ರತಿ ವರ್ಷ ವಿವಿಧ ಇಲಾಖೆಗಳು ವಿಶೇಷವಾಗಿ ಹಿಂದುಳಿದ ವರ್ಗಗಳ ಮತ್ತು ಸಮಾಜ ಕಲ್ಯಾಣ ಇಲಾಖೆಗಳು ಸಲ್ಲಿಸುವ ಪ್ರಗತಿಯ ವರದಿಗಳಿಂದ ಯಾವುದೇ ಸಕರಾತ್ಮಕ ಫಲಿತಾಂಶಗಳು ಸಿಗುವುದಿಲ್ಲ. ಹಿಂದುಳಿದ ವರ್ಗಗಳ ಜನರ ಪ್ರಸ್ತುತ ಬದುಕಿನ ವಿವಿಧ ಹಂತಗಳ ತುಲನಾತ್ಮಕ ಮತ್ತು ವೈಜ್ಞಾನಿಕ ಅಧ್ಯಯನ ನಡೆಸುವುದರೊಂದಿಗೆ; ಪ್ರಗತಿ ಹೊಂದಿದ ಜಾತಿ ಸಮುದಾಯಗಳು ಸ್ಥಿರವಾಗಿ ಮೀಸಲಾತಿ ಪಟ್ಟಿಯಲ್ಲಿಯೇ ಉಳಿಯದಂತೆ ನೋಡಿಕೊಳ್ಳುವುದು ಬಹಳ ಮುಖ್ಯವಾಗಿದೆ. "ಮೀಸಲಾತಿಯನ್ನು ಕುರಿತಾದ ಯಾವುದೇ ಕಲ್ಯಾಣ ಕಾರ್ಯಕ್ರಮಗಳು ಶಾಶ್ವತವಾಗಿ ಉಳಿಯಬಾರದು ಅಥವಾ ನಿರರ್ಥಕವೂ ಆಗಬಾರದು" ಎಂಬ ಮೂರನೆಯ ಹಿಂದುಳಿದ ವರ್ಗಗಳ ಆಯೋಗದ ಮುಖ್ಯಸ್ಥರಾಗಿದ್ದ ಶ್ರೀ ಚಿನ್ನಪ್ಪ ರೆಡ್ಡಿಯವರ ಅಭಿಪ್ರಾಯವು ಅತ್ಯಂತ ಅರ್ಥಗರ್ಭಿತ ಮತ್ತು ಸಮಂಜಸವಾಗಿದೆ. ಹೀಗೆ ಅನುಭವಾತ್ಮಕ ಅಧ್ಯಯನ ಮತ್ತು ಪರಿಮಣಾತ್ಮಕ ವಿಧಾನಗಳೊಂದಿಗೆ ಕ್ಷೇತ್ರಕಾರ್ಯದ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಿಕೊಂಡು; ಪ್ರಸ್ತುತ ಸಂಶೋಧನೆಯಲ್ಲಿ ಸಮಗ್ರ ಭಾರತೀಯ ಉಪ್ಪಾರರ ಇತಿಹಾಸ ಹಾಗೂ ಪರಂಪರೆಯನ್ನು ಅನ್ವಯಿಸಿಕೊಂಡು ರಾಯಚೂರು ಜಿಲ್ಲೆಯ ಉಪ್ಪಾರ ಸಮುದಾಯದವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಸ್ಥಿತ್ಯಂತರವನ್ನು ಕೂಲಂಕಶವಾಗಿ ಚರ್ಚಿಸಲಾಗಿದೆ.

ಪರಾಮರ್ಶನ ಗ್ರಂಥಗಳು

ಕನ್ನಡ ಗ್ರಂಥಗಳು

1. ಡಾ.ಕರಿಶೆಟ್ಟಿ ರುದ್ರಪ್ಪ (1995), ಮ್ಯಾಸಬೇಡರು ಒಂದು ಅಧ್ಯಯನ, ಕ.ಸಾ.ಪ, ಬೆಂಗಳೂರು
2. ಕುಮಾರ ವೆಂಕಣ್ಣ (1988), ಅಸ್ಪೃಶ್ಯರು (ಅನುವಾದ) (ಮೂಲ) ಅಂಬೇಡ್ಕರ್, ಬೆಂಗಳೂರು
3. ಗಂಗಾಧರ ದೈವಜ್ಞ (2000), ಬುಡಕಟ್ಟು ಸಮಾಜ-ಹುಟ್ಟು ಸಾವಿನ ನಡುವೆ, ಹಂಪಿ
4. ಡಾ.ಗುರುಲಿಂಗಯ್ಯ ಎಂ. (2008), ಕಾಡು ಗೊಲ್ಲರು, ಕ. ಪು. ಪ್ರಾ. ಬೆಂಗಳೂರು
5. ಡಾ.ಚಿದಾನಂದ ಮೂರ್ತಿ.ಎಂ (1966), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು
6. ಡಾ.ಚಿನ್ನಸ್ವಾಮಿ ಸೋಸಲೆ (2008), ಭಾರತೀಯ ಸಮಾಜ ಮತ್ತು ದಲಿತರು, ಹಂಪಿ
7. ಡಾ.ತಿಪ್ಪೇರುದ್ರಸ್ವಾಮಿ. ಹೆಚ್ (1969), ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು
8. ದೇವೇಂದ್ರಕುಮಾರಹಕಾರಿ(ಸಂ)(1993),ಉಪಸಂಸ್ಕೃತಿ-ಡೊಂಬರ ಸಂಸ್ಕೃತಿ, ಕ.ಸಾ.ಪ,
9. ಡಾ.ನಾಗರಾಜಪ್ಪ ಎಂ.ಹೆಚ್ (2003), ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ, ಬಿಳಿಗೆರೆ ತಿಪಟೂರು
10. ಡಾ.ನಾಗೇಶ್ ಎಚ್.ವಿ (2008), ಕರ್ನಾಟಕದ ಬುಡಕಟ್ಟುಗಳಲ್ಲಿ ನ್ಯಾಯ ತೀರ್ಮಾನ, ಧಾರವಾಡ
11. ನೀರಾವರಿ ಹೆಚ್.ಸಿ. (ಪ್ರ.ಸಂ) (2002), ಉಪ್ಪಾರ ಹಣತೆ, ಬೆಂಗಳೂರು
12. ಡಾ.ಪ್ರಭಾಕರ ಎ.ಎಸ್ (2001) ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಹಂಪಿ
13. ಡಾ.ಮೈತ್ರಿ ಕೆ.ಎಂ. (2002), ಬುಡಕಟ್ಟು ಕುಲ ಕಸುಬುಗಳು, ಹಂಪಿ
14. ಡಾ.ಮೊಗಳ್ಳಿ ಗಣೇಶ್ (2006), ಮೌಖಿಕ ಕಥನ, ಹಂಪಿ
15. ರಂಗಪ್ಪ ಗಂಗಪ್ಪ ಗೋರಬಾಳ (1994), ಉಪ್ಪಾರರ ಹಿನ್ನೆಲೆ, ಗೋಕಾಕ

English Books

1. Francis Buchanan (1807), A Journey from Madras through the countries of Mysore and Malbar, London
2. Col.Mecenzie (1828), The Mecenzie collections, Culcutta
3. Venkatarango Katti, Gezetteer of the Bombay Presidency of 1893
4. Ramesh Datt (1906),The Economic History of India undef early British rule, London
5. Edgard Thurston & K.Rangachari (1909), the Caste and Tribes of Southern India, Madras

6. B.L.Rice (1909) Mysore and Coorg from Inscriptions, London
7. Mysore Archaeology Report of 1932 (Published in 1935) Bangalore
8. R.G.Collingwood (1946), The Idea of History, London
9. D.D. Kosambi (1965), The Cultural and civilization of Ancient India in historical outline, London
10. Peter A. Clark (1966),The Journal of the Richard Hakluyat society, London

ಪ್ರೊ.ನಿರ್ಮಲ್ ರಾಜು
ಮಾರ್ಗದರ್ಶಕರು

ಡಿ.ರಾಮಕೃಷ್ಣ
ಸಂಶೋಧಕರು